ಕೇರಿಲೀರೋ ನಾಟಿ ವೈದ್ಯರು, ಅದೇನೋ ನಿಮ್ಮ್ ಚಿಚ್ಚಾಮಾತ್ರೆ ಗುಳ್ಗೆ ಕೊಡೋರಿದ್ದಾರಲ್ರ ಅದ್ನೂ ನೋಡಾಯ್ತು...'' ಎಂದು ತಲೆಕೆರೆದುಕೊಳ್ಳಲು, ''ವ್ಹೋ, ಹೋಮಿಯೋಪತಿ ಡಾಕ್ಟ್ರಾ? ಚಿಕ್ಕೋನಿದ್ದಾಗ ನಾನು ಆ ಸಿಹಿ ಮಾತ್ರೆಗೆ ಚಿಚ್ಚಾಮಾತ್ರೆ ಅಂತಿದ್ದೆ... ನಿಂಗಿನ್ನೂ ಅದೇ ನೆನ್ಪಿದೆ'' ಎಂದು ನಗಲು ಅವನೂ ಗೊಳ್ಳನೆ ನಕ್ಕಿದ್ದ. ''ಸರಿಸರಿ... ಮುಂದೆ ಹೇಳು...'' ಎನ್ನಲು ''ಹಾಂ, ಅದೇ ಎಲ್ಲಾ ಕಡೆ ಹೋಗಾಯ್ತು... ಏನೂ ಸುಧಾರಣೆ ಕಾಣ್ತಿಲ್ಲ. ಮಗ ತೆವ್ಳಕಂಡು ಹೋಗದನ್ನ ನೋಡೋಕಾಗ್ದೆ ಮಾದೇವಿ ಕಣ್ಣೀರು ಹಾಕ್ದೇ ಇದ್ದ ದಿನಾನೇ ಇಲ್ಲಾ. ನಾನೇ ಬೈದು ಬುದ್ಧಿ ಹೇಳಿ ಈಗ ಸ್ವಲ್ಪ ಗಟ್ಟಿಯಾಗದೆ. ಆದ್ರೆ ನಂಗೆ ಸಂಕ್ಟ ದಿನೇದಿನೇ ಹೆಚ್ಚಾಗ್ತಿದೆ. ಈ ಬದ್ಕನ್ನ ನಂಬ್ಕಂಡು ಎಷ್ಟು ದಿವ್ಸ ಇರಕಾಗ್ತದ್ರ? ಇವತ್ತು ಇರ್ತೀವಿ ನಾಳೆ ಗೊಂಯ್ಕ ಆಗ್ತೀವಿ. ಸುಟ್ ಸಾವಿಗೆ ಇರೋ ನಿಯತ್ತು ಬದ್ಕಿಗೆಲ್ಲದ್ರ? ಸಾಯೋದಂತೂ ಒಂದಲ್ಲ ಒಂದಿನ ಖಾತ್ರಿನೇ... ಬಪ್ಪದು ತಪ್ಪದು. ಆದ್ರೆ ನಾವು ಬದ್ಕದೇ ಕಷ್ಟ ನೋಡಿ... ಯಾವಾಗ ಹೇಂಗ್ ಕೈಕೊಡ್ತದೋ ಕಾಣೆ! ದುಡ್ಡು ಕೂಡಿಡೋವಷ್ಟು ಶ್ರೀಮಂತ ನಾನಲ್ಲ. ಹಾಂಗಾಗೇ ಇರೋವಷ್ಟು ದಿವ್ಸ ಮಗೂನ ಹೀಂಗೆ ಬುಟ್ಟಿಲಾದ್ರೂ ಕೂರಿಸ್ಕಂಡು ನನ್ಕೈಲಿ ಎಲ್ಲೆಲ್ ಆಗ್ತದೋ ಅಲ್ಲೆಲ್ಲಾ ಹೋಗಿ ನಮ್ಮೂರನ್ನಾದ್ರೂ ತೋರ್ಸೋಣ ಅಂತ ಅಂದ್ಕಂಡಿದೀನಿ. ಬಾಕಿ ದಿವ್ಸ ಬಿಡ್ವಾದಾಗೆಲ್ಲಾ ಹೀಂಗೇ ಬುಟ್ಟಿಲಿ ಹೊತ್ಕಂಡು ಮಾದೇವಿನೂ ಹೋಗ್ತಿರ್ತಾಳೆ. ಆದ್ರೆ ಪಾಪ ಹೆಣ್ ಜೀವ ಜಾಸ್ತಿ ದೂರ ಹೋಗೋದೇ ಕಷ್ಟ. ಹೀಂಗಾಗಿ ನಾನು ರಜೆ ಹಾಕಿ ಓಡಾಡ್ಸೋದು. ನಾವಿರೋಷ್ಟು ದಿವ್ಸನಾದ್ರೂ ಮಗು ಪ್ರಪಂಚ ಕಾಣ್ಲಿ ಹೇಳಿ... ತಪ್ಪೇನ್ರಾ? ಅವ್ನ ಅಪ್ಪಾಗಿ ನಾ ಬೇರೆನೂ ಮಾಡೂಕಾಗ್ದೇ ಹೋದ್ರೂ ಇಷ್ಟಾದ್ರೂ ಮಾಡಿ ಜೀವ ಬಿಟ್ರೆ ಶಿವ ಮೆಚ್ಚಿ ಮಗೂ ಕಾಲಿಗೆ ಮುಂದಾದ್ರೂ ಶಕ್ತಿ ಕೊಟ್ಟಾನು ಅಂತ ಆಸೆ... ಹಾಂಗಾಗೇ ಇಷ್ಟೆಲ್ಲಾ ಒದ್ದಾಡ್ತಿರೋದು. ನನ್ನ್ ಕಷ್ಟ ನೋಡೂಕಾಗ್ದೇ ಪಕ್ಕದ್ಮನೆ ನಾಗಜ್ಜ ತಾನೇ ಖುದ್ದಾಗಿ ಈ ಬಿದ್ರ ಬುಟ್ಟಿ ಮಾಡ್ಕೊಟ್ಟವ್ನೆ... ಮಗೂಗೆ ಕೂರ್ಸಿಕಂಡು ಹೋಗೋಕೆ ಸರಿಯಾಗ್ತದೆ ಅಂತ... ಇದಾದ್ರೂ ಎಷ್ಟ್ ದಿವ್ಸ ಬರ್ತದೋ ಕಾಣೆ! ಆದಷ್ಟ್ ದಿವ್ಸ ಹೊತ್ಕಂಡ್ ತಿರ್ಗದು ಅಂದ್ಕಂಡಿದೀವಿ ನಾನು ಮಾದೇವಿ'' ಎಂದು ಹನಿಗಣ್ಣಾಗಲು ಪಟಪಟನೆ ಮೇಲಿಂದುದುರಿದ ಹನಿಗಳ ಜೊತೆಗೆ ನನ್ನ ಕಣ್ಣ ಹನಿಗಳೂ ಬೆರೆತು ಒಂದಾಗಿಬಿಟ್ಟಿದ್ದವು.

ಮರುದಿವಸ ಊರಿಗೆ ಹೊರಡುವ ಮುನ್ನ ಅಪ್ಪನಿಗೆ ವಿಷಯ ತಿಳಿಸಿ ತಾಕೀತು ಮಾಡಿಯೇ ಹೊರಟಿದ್ದೆ. ಜೋತಯ್ಯನಿಗೆ ಕಡ್ಡಾಯವಾಗಿ ತಿಂಗಳಲ್ಲಿ ಕನಿಷ್ಠ ಐದು ದಿವ್ಸ ರಜೆ ಕೊಡ್ಬೇಕು... ಅದ್ರ ಸಂಬಳ ಬೇಕಿದ್ರೆ ನಾನು ಕೊಡ್ತೀನಿ ನಿಂಗೆ ಅಂತ ಹೇಳ್ದಾಗ, ಅಪ್ಪನೂ ಕಷ್ಟ ಉಂಡ ಜೀವ... ''ಐದು ದಿವಸದ ಸಂಬ್ಳದಿಂದ್ಲೇ ನನ್ನ ಹೊಟ್ಟೆ ತುಂಬಬೇಕಾಗಿಲ್ಲ ಅನಂತು'' ಎಂದು ಗದರಿ ಕಳುಹಿಸಿದ್ದ.

ಆದರೆ ಅದ್ಯಾವ ದುರ್ವಿಧಿ ಕಾಡಿತೋ ಏನೋ, ವರುಷದೊಳಗೇ ಜೋತಯ್ಯ ಹೃದಯಾಘಾತವಾಗಿ ಕಣ್ಮುಚ್ಚಿದ ಸುದ್ದಿ ನನ್ನ ಬಂದಪ್ಪಳಿಸಿತ್ತು! ಊರವರೆಲ್ಲಾ ಮಗನನ್ನು ಹೊತ್ತು ತಿರುಗಿದ ಭಾರಕ್ಕೇ ಅವನಿಗೆ ಎದೆನೋವು ಕಾಡಿ ಸತ್ತಿದ್ದು ಎಂದೇ ಗುಸುಗುಟ್ಟಿದ್ದರಂತೆ. ಅಪ್ಪಯ್ಯ ಮಾತ್ರ ಮಗನ ಭವಿಷ್ಯತ್ತಿನ ಚಿಂತೆಯ ಭಾರಕ್ಕೇ ಕುಗ್ಗಿಹೋದ ಪಾಪದವ ಎಂದು ವಾರಗಟ್ಟಲೇ ಒದ್ದಾಡಿದ್ದ. ನಾವೆಲ್ಲಾ ಕೈಲಾದಷ್ಟು ಸೇರಿಸಿಕೊಟ್ಟ ಪುಟ್ಟಗಂಟಿನ ಜೊತೆಗೆ ಜೋತಯ್ಯನ ಹೆಂಡತಿ ಮಾದೇವಿ ಮಗುವನ್ನು ಕರೆದುಕೊಂಡು ತನ್ನ ತವರಿಗೆ ಹೋಗಿಬಿಟ್ಟಿದ್ದಳು. ಅವರೊಂದಿಗೇ ಆ ಬಿದಿರಿನ ಬುಟ್ಟಿಯೂ ಸಾಗಿಬಿಟ್ಟಿತ್ತು. ತದನಂತರ ಊರಿಗೆ ಬಂದಾಗೆಲ್ಲಾ ನನ್ನೊಳಗೆ ವಿಚಿತ್ರ ತಳಮಳವಾಗಿಬಿಡುತ್ತಿತ್ತು. ಅದೇಕೋ ಏನೋ ಆ ದಿವಸದ ನಂತರ ಆ ಮುರುಗಲು ಗುಡ್ಡದ ವ್ಯೂ ಪಾಯಿಂಟಿಗೆ ನಾನಾಗಲೀ ಮಗಳಾಗಲೀ ಹೋಗಲೇ ಇಲ್ಲ! ಮಾದೇವಿಯ ತವರಾದರೂ ಎಲ್ಲಿದೆ ಎಂಬುದನ್ನು ತಿಳ್ಕೊಂಡಿರ್ಬೇಕಿತ್ತು ಎಂದು ಹಲವು ಬಾರಿ ಹಳಹಳಿಸಿದ್ದಿದೆ.

ಕ್ರಮೇಣ ಪಟ್ಟಣದ ಕಾಯಂ ವಾಸಿಯಾಗಿ, ಊರಿನ ಹೊಲ, ಮನೆಯೆಲ್ಲಾ ಮಾರಾಟವಾಗಿ,